

ಬಿಸಿಲು
ಬೆಳದಿಂಗಳು

ಡಾ. ಶಿವಮೂರ್ತಿ ಶಿವಾಚಾರ್ಯ ಸ್ವಾಮೀಜಿ
swamiji@taralabalu.org

# ಕೂಡಲಿಲ್ಲದ ಕೂಟ, ಅಗಲಲಿಲ್ಲದ ಅಪ್ಪುಗೆ!

ಗ್ರಾಮೀಣ ಜನರಿಗೆ ತೀರಾ ಹತ್ತಿರದ ಗ್ರಂಥಸ್ಥ ಸಾಹಿತ್ಯಪ್ರಕಾರವೆಂದರೆ 'ಸಾಂಗತ್ಯ'. ಹಬ್ಬ ಹರಿದಿನಗಳಂದು ಪುಣ್ಯಪುರುಷರ ಕಥಾಶ್ರವಣವನ್ನು ಏರ್ಪಡಿಸುವುದು ಹಳ್ಳಿಗಳಲ್ಲಿ ಮೊದಲಿನಿಂದಲೂ ಉಳಿದುಕೊಂಡು ಬಂದಿರುವ ಒಂದು ಶಿಷ್ಟ ಧಾರ್ಮಿಕ ಸಂಪ್ರದಾಯ. ಗುಡಿಯಲ್ಲೋ, ಮನೆಗಳಲ್ಲೋ ಶ್ರಾವಣಮಾಸದಲ್ಲಿ ಏರ್ಪಡಿಸುತ್ತಿದ್ದ ಇಂತಹ ಕಥಾಕಾಲಕ್ಷೇಪಗಳನ್ನು ನಮ್ಮ ಬಾಲ್ಯದಲ್ಲಿ ಅರಳಿದ ಕಣ್ಣುಗಳಿಂದ ನೋಡಿದ ದೃಶ್ಯ ಈಗಲೂ ಮನಸ್ಸಿನಲ್ಲಿ ಅಚ್ಚಳಿಯದಂತೆ ಉಳಿದಿದೆ. ಆಗ ಓದು-ಬರಹ ಬಲ್ಲವರು ಬಹಳ ಕಡಿಮೆ. ಊರಿಗೆ ಕೆಲವೇ ಕೆಲವರು ಬೆರಳೆಣಿಕೆಯಷ್ಟು ಜನ. ಅದರಲ್ಲೂ ಹಿಂದಿನ ಕಾಲದ 'ಮೋಡಿ ಅಕ್ಷರ' ಗಳನ್ನು ಓದುವ ಜನರಂತೂ ವಿರಳವೇ. ಊರಿಗೆ ಒಬ್ಬರೋ ಇಬ್ಬರೋ ಸಿಕ್ಕರೆ ಹೆಚ್ಚು. ಅವರನ್ನು ಪುರಾಣ ಹೇಳುವವರು, ಕಥೆ ಹೇಳುವವರು ಎಂದೇ ಹಳ್ಳಿಯ ಜನ ಗೌರವದಿಂದ ಕರೆಯುತ್ತಿದ್ದರು.

ಸ್ನಾನ ಮಾಡಿ ಶುಚಿರ್ಭೂತರಾಗಿ, ಶುಭ್ರವಾದ ಬಿಳಿಯ ಪಂಚೆಯನ್ನಷ್ಟೇ ಉಟ್ಟು, ಎದೆಯ ಮೇಲೆ ಯಾವ ಬಟ್ಟೆಯನ್ನೂ ತೊಡದೆ, ಉಟ್ಟ ಪಂಚೆಯ ಒಂದು ತುದಿಯನ್ನೇ ಮೈಮೇಲೆ ಕೊರಳ ಸುತ್ತ ಎಳೆದುಕೊಳ್ಳುತ್ತಿದ್ದರು. ಹಣೆಯ ಮೇಲೆ ವಿಭೂತಿ ಧರಿಸಿ, ನಂದಾದೀಪವನ್ನು ಹಚ್ಚಿ, ಬಟ್ಟೆಯಿಂದ ಜೋಪಾನವಾಗಿ ಕಟ್ಟಿದ್ದ ತಾಳೆಗರಿಯ ಕಟ್ಟನ್ನು ಕೈಗೆತ್ತಿಕೊಂಡರೆಂದರೆ ಅವರ ಮೈ ಪುಳಕಗೊಳ್ಳುತ್ತಿತ್ತು. ತಾಯಿ ತನ್ನ ಮುದ್ದು ಮಗುವನ್ನು ಹಾಲುಣಿಸಲು ಎದೆಗೆ ಅವಚಿಕೊಳ್ಳುವಾಗ ಆಗುವ ಅನುಭವ ಅವರಿಗೆ. ತಾಳೆಗರಿಯ ಕಟ್ಟಿಗೆ ಗಂಧಾಕ್ಷತೆಯನ್ನು ಲೇಪಿಸಿ, ಪತ್ರೆ ಪುಷ್ಪಗಳಿಂದ ಪೂಜಿಸಿ, ಘಂಟಾನಾದ ಮಾಡುತ್ತಾ ಕರ್ಪೂರವನ್ನು ಬೆಳಗಿ, ಭಕ್ತಿಯಿಂದ ಕೈ ಮುಟ್ಟಿ ನಮಸ್ಕರಿಸಿ ಕಣ್ಣಿಗೆ ಒತ್ತಿಕೊಳ್ಳುತ್ತಿದ್ದರು. ನಂತರ ತಾಳೆಗರಿಗಳ ಮೇಲಿನ ಮರದ ಕಟ್ಟನ್ನು ನಿಧಾನವಾಗಿ ದಾರದಿಂದ ಸಡಿಲಿಸಿ, ಕಣ್ಣಿಗೆ 'ಚಾಳೀಸ'ನ್ನು ಏರಿಸಿ, ಎರಡೂ ಕೈಗಳಿಂದ ತಾಳೆಗರಿಯೊಂದನ್ನು ಹಿಡಿದು, ದೀಪದ ಬೆಳಕಿಗೆ ಎತ್ತಿ ಮೇಲಕ್ಕೆ ಹಿಡಿದರೆಂದರೆ ಏನೋ ಒಂದು ಅವರ್ಣನೀಯ ಅಲೌಕಿಕ ಆನಂದಾನುಭೂತಿ ಅವರ ಕಣ್ಣುಗಳಲ್ಲಿ ಕಾಣುತ್ತಿತ್ತು. ಒಂದೊಂದೇ ಗರಿಯನ್ನು ತಿರುವುತ್ತಾ ರಾಗಬದ್ಧವಾಗಿ ಹಾಡುವ ಅವರ ತನ್ಮಯತೆ, ಭಕ್ತಿಪರವಶತೆ ನಿಜಕ್ಕೂ ಮೆಚ್ಚುವಂತಹದು. ಒಬ್ಬರು ರಾಗವಾಗಿ ಹಾಡುತ್ತಾ ಓದಿದರೆ, ಮತ್ತೊಬ್ಬ ಹಿರಿಯರು ಒಂದೊಂದೇ ಪದ್ಯ ಮುಗಿದಂತೆ ಅದರ ಅರ್ಥವಿವರಣೆ ನೀಡುತ್ತಾ ಹೋಗುತ್ತಿದ್ದರು. ಕಥೆಯನ್ನು ಕೇಳಲು ಶ್ರದ್ಧೆಯಿಂದ ಸುತ್ತುವರಿದು ಸೇರಿದ್ದ ಜನರು ಮಧ್ಯೆ ಮಧ್ಯೆ ಮೆಚ್ಚುಗೆಯ ಉದ್ಗಾರವನ್ನು ಎಳೆಯುತ್ತಿದ್ದರು. ಕಥಾ ನಿರೂಪಣೆಯಲ್ಲಿ ದೇವರು ಪ್ರತ್ಯಕ್ಷಗೊಳ್ಳುವ ಪ್ರಸಂಗವೇನಾದರೂ ಬಂದರೆ ಅಥವಾ ದೇವರ ಸ್ತುತಿಯೇನಾದರೂ ಬಂದರೆ ಮಧ್ಯಕ್ಕೇ ಕಥೆ ಹೇಳುವುದನ್ನು ನಿಲ್ಲಿಸಿ ಮಂಗಳಾರತಿಯನ್ನು ಮಾಡುತ್ತಿದ್ದರು. ನಂತರ ಮತ್ತೆ ಕಥೆಯನ್ನು ಮುಂದುವರಿಸುತ್ತಿದ್ದರು. ಒಂದೊಂದು ಸಂಧಿಯ ಮುಕ್ತಾಯಕ್ಕೋ ಅಥವಾ ಕಥೆಯ ಬೆಳವಣಿಗೆಯ ಸೂಕ್ತ ನಿಲುಗಡೆಯ ಹಂತಕ್ಕೋ ನಿಲ್ಲಿಸಿ, ಗರಿಗಳ ಮಧ್ಯೆ ಗುರುತಿಗೆಂದು ಒಂದು ಬಿಲ್ವಪತ್ರೆಯನ್ನಿರಿಸಿ, ಕೊನೆಯಲ್ಲಿ ಮಹಾಮಂಗಳಾರತಿಯನ್ನು ಮಾಡಿ ಎಲ್ಲರಿಗೂ ಪ್ರಸಾದ ವಿನಿಯೋಗ ಮಾಡುತ್ತಿದ್ದರು. ಅದುವರೆಗೆ ಕೈ ಕಟ್ಟಿ ಕುಳಿತು ಆಲಿಸುತ್ತಿದ್ದ ನಮಗೆ ಮತ್ತು ಓರಿಗೆಯ ಮಕ್ಕಳಿಗೆ ಹಿರಿಯರು ಕಥೆಯನ್ನು ಬಿಡಿಸಿ ಹೇಳುವಾಗ ಮಾತ್ರ ಅಲ್ಪ ಸ್ವಲ್ಪ ತಿಳಿಯುತ್ತಿತ್ತು. ಕೊನೆಯಲ್ಲಿ ವಿತರಣೆ ಮಾಡುತ್ತಿದ್ದ ಬಾಳೆಹಣ್ಣಿನ ಗಾಲಿಗಳು ಮಾತ್ರ ಮರುದಿನವೂ ಬಾಯೂರಿ, ದಾಪುಗಾಲಿನಿಂದ ಕಥಾಶ್ರವಣಕ್ಕೆ ಬರುವಂತೆ ಆಕರ್ಷಿಸುತ್ತಿದ್ದವು. ಇಂದಿನ ಶಾಲಾ ಮಕ್ಕಳು ಉಪಾಹಾರದ ಆಸೆಯಿಂದ ಎನ್.ಸಿ.ಸಿ ತರಬೇತಿಗೆ ಹೋಗುವಂತೆ!

ಇಂತಹ ಒಂದು ಸಾಂಗತ್ಯ ಗ್ರಂಥ 16ನೆಯ ಶತಮಾನದ ಕವಿ ಚಿಕ್ಕರಾಚಯ್ಯನ "ಮಹಾದೇವಿಯಕ್ಕನ ಸಾಂಗತ್ಯ." 1938 ರಷ್ಟು ಹಿಂದೆಯೇ ಪ್ರಸಿದ್ಧ ಸಾಹಿತಿಗಳಾದ ರಂ.ಶ್ರೀ. ಮುಗಳಿಯವರು "ಶರಣ ಸಾಹಿತ್ಯ" ಎಂಬ ಪತ್ರಿಕೆಯಲ್ಲಿ ಈ ಕೃತಿಯ ಬಗ್ಗೆ ಒಂದು ವಿಸ್ತೃತ ಲೇಖನವನ್ನು ಬರೆದರು. ಬೆಂಗಳೂರು ವಿಶ್ವವಿದ್ಯಾನಿಲಯದ ನಿವೃತ್ತ ಪ್ರಾಧ್ಯಾಪಕರಾದ, ಶರಣ ಸಾಹಿತ್ಯವನ್ನು ಕುರಿತು ಬಹಳಷ್ಟು ಕೆಲಸ ಮಾಡಿರುವ ಡಾ॥ ಎಸ್ ವಿದ್ಯಾಶಂಕರ ಅವರು ಅಮೂಲಾಗ್ರವಾಗಿ ಸಂಶೋಧಿಸಿ ತುಂಬಾ ಶ್ರಮವಹಿಸಿ ಸಂಪಾದಿಸಿಕೊಟ್ಟಿದ್ದು ಈ ಗ್ರಂಥವನ್ನು ನಮ್ಮ ಮಠದಿಂದ 1985 ರಲ್ಲಿ ಮೊಟ್ಟಮೊದಲಿಗೆ ಪ್ರಕಟಿಸಲಾಗಿದೆ. ವೈರಾಗ್ಯನಿಧಿ ಅಕ್ಕಮಹಾದೇವಿಯ ಜೀವನವನ್ನು ಕುರಿತಂತೆ ಕೆಲವು ಐತಿಹಾಸಿಕ ಸಂಗತಿಗಳ ಮೇಲೆ ಬೆಳಕು ಚೆಲ್ಲುವ ಮಹತ್ವಪೂರ್ಣ ಕೃತಿ ಇದಾಗಿದೆ. ದೂರದ ಈಗಿನ ಗುಲ್ಬರ್ಗಾ ಜಿಲ್ಲೆಯ ಸುರಪುರ ತಾಲ್ಲೂಕಿನ ಕೊಡೆಯಕಲ್‌ನವನಾದ ಗ್ರಂಥಕರ್ತ ಚಿಕ್ಕರಾಚಯ್ಯನು ಅಕ್ಕಮಹಾದೇವಿಗೆ ಬಾಲ್ಯದಲ್ಲಿ ಲಿಂಗದೀಕ್ಷೆಯನ್ನು ಕರುಣಿಸಿದವರು ನಮ್ಮ ತರಳಬಾಳು ಗುರುಪರಂಪರೆಯ ಮೂಲಪುರುಷನಾದ ವಿಶ್ವಬಂಧು ಮರುಳಸಿದ್ಧನೆಂದು ತನ್ನ ಸಾಂಗತ್ಯದ ಮೊದಲನೆಯ ಸಂಧಿಯಲ್ಲಿ ಉಲ್ಲೇಖಿಸಿರುವುದು ಅತ್ಯಂತ ಗಮನಾರ್ಹವಾದ ಸಂಗತಿಯಾಗಿದೆ.

ಶ್ರೀಗುರು ಮರುಳಸಿದ್ಧೇಶ್ವರ ಶಿವಯೋಗಿ
ಆಗಮದೀಕ್ಷಾಚಾರ್ಯ
ಆಗಳೆ ಓಂಕಾರಶೆಟ್ಟಿಯ ಗೃಹಕೆ ದೀ-
ಕ್ಷಾಗುರುವಾಗಿ ಚಿತ್ತೈಸೆ (ಸಾಂಗತ್ಯ 1.46)

ಅಕ್ಕಮಹಾದೇವಿಯ ಜನ್ಮಸ್ಥಳವಾದ ಉಡುತಡಿಯು ಶಿಕಾರಿಪುರ ಮತ್ತು ಶಿರಾಳಕೊಪ್ಪದ ಮಧ್ಯೆ ಇದೆ. ಮರುಳಸಿದ್ಧನು ಇಲ್ಲಿಗೆ ಬಂದಿದ್ದನೆಂಬುದಕ್ಕೆ ಕುರುಹಾಗಿ ಶಿಕಾರಿಪುರಕ್ಕೆ ಮೂರು ಮೈಲಿ ದೂರದಲ್ಲಿ ಇನಾಂ ಬೇಗೂರು

ಹತ್ತಿರ ಒಂದು ಮರಡಿಯ ಮೇಲೆ ಮರುಳಸಿದ್ಧನ ದೇವಾಲಯವಿದೆ. ಈ ದೇವಾಲಯದಲ್ಲಿ ಎರಡು ಲಿಂಗಗಳಿವೆ. ಒಂದು ಮರುಳಸಿದ್ಧನದು, ಮತ್ತೊಂದು ಆತನ ಗುರು ರೇವಣಸಿದ್ಧನದು.

ಚಿಕ್ಕರಾಚಯ್ಯನಿಗಿಂತಲೂ ಹಿಂದೆ ಅಕ್ಕಮಹಾದೇವಿಯ ಜೀವನವನ್ನು ಕುರಿತು ಬರೆದ ಎರಡು ಪ್ರಮುಖ ಗ್ರಂಥಗಳೆಂದರೆ ಹರಿಹರನ "ಅಕ್ಕಮಹಾದೇವಿ ರಗಳೆ" ಮತ್ತು ಚನ್ನಬಸವಾಂಕನ 'ಅಕ್ಕಮಹಾದೇವಿ ಪುರಾಣ.' ಚನ್ನಬಸವಾಂಕನು ಚಿಕ್ಕರಾಚಯ್ಯನಿಗಿಂತ ಕಾಲದಲ್ಲಿ ಸುಮಾರು ಐವತ್ತು ವರ್ಷಗಳಷ್ಟು ಹಿಂದೆ ಇದ್ದವನು. ರಗಳೆ, ಪುರಾಣ ಮತ್ತು ಸಾಂಗತ್ಯ ಈ ಮೂರೂ ಕೃತಿಗಳ ಕಥಾನಿರೂಪಣೆಯಲ್ಲಿ ಅನೇಕ ವ್ಯತ್ಯಾಸಗಳಿವೆ. ಅಕ್ಕಮಹಾದೇವಿಗೆ ಕೌಶಿಕನೊಂದಿಗೆ ಮದುವೆಯಾಗಿತ್ತೇ ಇಲ್ಲವೇ ಎಂಬುದು ವಿವಾದಾಸ್ಪದ ಸಂಗತಿಯಾಗಿದೆ. ಪ್ರಾಚೀನ ಗ್ರಂಥಗಳಲ್ಲಿಯೂ ಮತಭೇದವಿದೆ; ಆಧುನಿಕ ವಿದ್ವಾಂಸರಲ್ಲಿಯೂ ಭಿನ್ನಾಭಿಪ್ರಾಯವಿದೆ. ಹರಿಹರನ ರಗಳೆ ಮತ್ತು ಇತರ ಪುರಾಣಗಳಲ್ಲಿ ಮದುವೆಯಾಗಿತ್ತೆಂದು ಚಿತ್ರಿಸಲಾಗಿದೆ. ಹರಿಹರನ ಪ್ರಕಾರ ಕೌಶಿಕರಾಜನ ಬೆದರಿಕೆ, ತಂದೆತಾಯಿಗಳಿಗೆ ಕೇಡುಂಟಾಗಬಹುದೆಂಬ ಭೀತಿ ಮೊದಲಾದ ಪರಿಸ್ಥಿತಿಯ ಒತ್ತಡಕ್ಕೆ ಮಣಿದು ಅಕ್ಕ ಮದುವೆಯಾಗಲು ಮೂರು ಷರತ್ತುಗಳನ್ನು ವಿಧಿಸುತ್ತಾಳೆ. 1) ಎನ್ನಿಚ್ಛೆಯಿಂ ಶಿವನ ಪೂಜೆಯೊಳು ನಲಿದಿಪ್ಪೆ, 2) ಎನ್ನಿಚ್ಛೆಯಿಂ ಮಹೇಶ್ವರರ ಗೋಷ್ಠಿಯೊಳಿಪ್ಪೆ, 3) ಎನ್ನಿಚ್ಛೆಯಿಂ ಗುರುವಿನಂಘ್ರಿಸೇವೆಯೊಳಿಪ್ಪೆ. ತನ್ನಿಚ್ಛೆಯಂತೆ ಶಿವಪೂಜೆ, ಮಾಹೇಶ್ವರಗೋಷ್ಠಿ ಮತ್ತು ಗುರುವಿನ ಸೇವೆ ಮಾಡಿಕೊಂಡಿರಲು ಅಡ್ಡಿಪಡಿಸಬಾರದೆಂಬ ಷರತ್ತಿನ ಮೇಲೆ ಮದುವೆಯಾದ ಅಕ್ಕ ಕೌಶಿಕನಿಂದ ಆ ಮೂರು ಷರತ್ತುಗಳು ಮುರಿಯುವುದನ್ನೇ ಕಾಯುತ್ತಿರುತ್ತಾಳೆ. ಮೂರನೆಯ ಷರತ್ತನ್ನು ಕೌಶಿಕ ಮುರಿಯುತ್ತಿದ್ದಂತೆಯೇ "ಬರ್ದುಂಕಿದೆಂ ಬರ್ದುಂಕಿದೆನೆನುತಾಶಾರಹಿತೆ ಕೇಶಾಂಬರೆಯಾಗಿ" ತಟ್ಟನೆ ಅರಮನೆಯಿಂದ ಹೊರಹೊರಟಳೆಂದು ಹರಿಹರ ತನ್ನ ರಗಳೆಯಲ್ಲಿ ತೀರಾ ನಾಟಕೀಯವಾಗಿ ಚಿತ್ರಿಸಿದ್ದಾನೆ. ಹೃದಯದಲ್ಲಿ ಸ್ಪಂದಿಸುವ ಭಾವನೆಗಳು ಹೀಗೆ ಗಣಿತದ ಕೂಡು-ಕಳೆಯುವಿಕೆಗಳಿಗೆ, ಗುಣಾಕಾರ ಭಾಗಾಕಾರಗಳಿಗೆ ಸಿಕ್ಕುವ ಶುಷ್ಕ ಸಾಮಗ್ರಿಯಲ್ಲ. ಇದೇ ಲೆಕ್ಕಾಚಾರದಲ್ಲಿ ಪುರಾಣವು ರಗಳೆಯ ಜಾಡನ್ನೇ ಹಿಡಿದರೂ ರಾಜನಾದ ಕೌಶಿಕನಿಂದ ಮದುವೆಯ ಒತ್ತಾಯ ಬಂದಾಗ ಅಕ್ಕನ ಹೃದಯದಲ್ಲಿ ಸ್ಫುರಿಸುವ ಅಸಹಾಯಕತೆಯ ತಳಮಳವನ್ನು ಚನ್ನಬಸವಾಂಕ ತನ್ನ ಪುರಾಣದಲ್ಲಿ ಹೃದಯಂಗಮವಾಗಿ ವರ್ಣಿಸಿದ್ದಾನೆ.

ಚಿಕ್ಕರಾಚಯ್ಯನ ಸಾಂಗತ್ಯದಲ್ಲಿ ಅಕ್ಕ ಮದುವೆಯನ್ನು ಸ್ಪಷ್ಟವಾಗಿ ತಿರಸ್ಕರಿಸಿದಳೆಂದು ಚಿತ್ರಿಸಲಾಗಿದೆ. ಲೌಕಿಕ ಜೀವನದಲ್ಲಿ ಇಷ್ಟವಿಲ್ಲದ ಗಂಡನ್ನು ಮದುವೆಯಾಗಲು ಒತ್ತಾಯಪಡಿಸಿದರೆ ಹೆಣ್ಣಿನಿಂದ ಬರಬಹುದಾದ ನೈಜ ಪ್ರತಿಕ್ರಿಯೆ ಈ ಸಾಂಗತ್ಯದಲ್ಲಿ ಕಾಣಸಿಗುತ್ತದೆ. ಮದುವೆಯ ಪ್ರಸ್ತಾಪವನ್ನು ರಾಜನ ಕಡೆಯಿಂದ ಮಂತ್ರಿ ತಂದಾಗ ತಂದೆತಾಯಿಗಳಿಗೆ ದಿಗಿಲಾಗುತ್ತದೆ. ಸೌಜನ್ಯದಿಂದ ನಿರಾಕರಿಸಿದ ಅಕ್ಕ ಹೆಚ್ಚು ಒತ್ತಾಯಪಡಿಸಿದರೆ ಪ್ರಾಣವನ್ನು ಕಳೆದುಕೊಳ್ಳುವುದಾಗಿ ಬೆದರಿಕೆಯೊಡ್ಡುತ್ತಾಳೆ. ಅವಳ ರೂಪಕ್ಕೆ ಮರುಳಾಗಿದ್ದ ರಾಜ ಸ್ವತಃ ಆಕೆಯ ಮನೆಗೆ ಬರುತ್ತಾನೆ. ಮದುವೆಯಾಗುವಂತೆ ಒತ್ತಾಯಿಸುತ್ತಾನೆ. ಸಿರಿ-ಸಂಪತ್ತಿನ ಪ್ರಲೋಭನೆಗಳನ್ನು ಒಡ್ಡುತ್ತಾನೆ.

**ಕೊಡುವೆ ಬೇಡಿದುದ ನಾಣ್ನುಡಿಯಲ್ಲ ನಿನ್ನಾಣೆ**
**ನಡೆ ನನ್ನ ಅರಮನೆಗೆ ಬಾಲೆ**
**ಮಡದಿಯಲ್ಲವು ನನ್ನ ಜೀವರತ್ನವು ಸಿರಿ**
**ಬಡವನ ಸೋಂಕಿದಂತಹುದು**

ಈ ಯಾವ ಪ್ರಲೋಭನೆಗಳಿಗೂ ಒಳಗಾಗದೇ ಇದ್ದಾಗ 'ಎಳದೊಯ್ವೆ ಬಿಡೆ ಬಾರದಿರಲು' ಎಂದು ಬೆದರಿಕೆಯೊಡ್ಡುತ್ತಾನೆ. ಯಾವುದಕ್ಕೂ ಅಕ್ಕ ಜಗ್ಗದೆ ಇದ್ದಾಗ ಕಾಮಾಂಧನಾದ ಕೌಶಿಕ ಅವಳ ಸೆರಗನ್ನು ಹಿಡಿದು ಬಲಾತ್ಕಾರದಿಂದ ಎಳೆದುಕೊಂಡುಹೋಗಲು ಮುಂದಾಗುತ್ತಾನೆ. ಇದರಿಂದ ಸಿಡಿಮಿಡಿಗೊಂಡ ಅಕ್ಕ ತನ್ನ ಉಟ್ಟ ಉಡುಗೆ ತೊಡುಗೆಗಳನ್ನು ಕಿತ್ತು ಹಾಕಿ ರಾಜನ ಮುಖಕ್ಕೆ ಎಸೆದು ದಿಗಂಬರೆಯಾಗಿ ಬೀದಿಗಿಳಿಯುತ್ತಾಳೆ.

ಅಕ್ಕನು ಕೌಶಿಕನೊಂದಿಗೆ ಮದುವೆಯಾಗಿರಲಿ, ಆಗಿಲ್ಲದೇ ಇರಲಿ, ಒಟ್ಟಿನಲ್ಲಿ ಹೇಳುವುದಾದರೆ ಯೌವನಾವಸ್ಥೆಯಲ್ಲಿ ತಾನು ಉಟ್ಟ ಬಟ್ಟೆಗಳನ್ನು ತೆಗೆದು ಹಾಕಿ ದಿಗಂಬರೆಯಾಗುವ ಮಟ್ಟಿಗೆ ಮಾನಸಿಕ ಉದ್ವೇಗಕ್ಕೊಳಗಾಗುವಂತೆ ತೀವ್ರವಾಗಿ ಪ್ರೇರೇಪಿಸಿದಂತಹ ಏನಾದರೊಂದು ವಿಶೇಷ ಘಟನೆ ನಡೆದಿರಲೇಬೇಕು. ಹೃದಯದಲ್ಲಿ 'ಶರಣಸತಿ-ಲಿಂಗಪತಿ' ಎಂಬ ಭಾವ ಅಂಕುರಿಸಿದ ಅಕ್ಕ ಕೌಶಿಕನನ್ನು ಒಲ್ಲದ ಮನಸ್ಸಿನಿಂದ ಕೈಹಿಡಿದು ಅವನ ಅತಿಯಾದ ಕಾಮುಕ ಭಾವನೆಯಿಂದ ಹೇಸಿ ಜುಗುಪ್ಸೆಗೊಂಡು ಹಾಗೆ ಮಾಡಿದಳೋ ಅಥವಾ ತನ್ನ ಮೇಲೆ ಮದುವೆಯ ಒತ್ತಾಯವನ್ನು ತಂದಾಗ ಅದನ್ನು ಸಹಿಸಲಾರದೆ ಸಿಡಿದೆದ್ದು ಹಾಗೆ ಮಾಡಿದಳೋ ತಿಳಿಯದು. ಅಂತೂ ಅಕ್ಕ "ಕಾಯದ ಲಜ್ಜೆಯ ಕಲ್ಪಿತವ ಕಳೆದು, ಜೀವದ ಲಜ್ಜೆಯ ಮೋಹವನಳಿದು, ಮನದ ಲಜ್ಜೆಯ ನೆನಹ ಸುಟ್ಟು, ಭಾವದ ಕೂಟ ಬತ್ತಲೆಯೆಂದರಿದು" ದೇಹಾಭಿಮಾನಗಳ ಹಂಗನ್ನು ತೊರೆದ ವೀರವಿರಾಗಿಣಿ! ಅಕ್ಕನ ಹೃದಯದಲ್ಲಿ ಉಂಟಾದ ದಿಗಂಬರತೆಯ ಭಾವಸ್ಫುರಣವನ್ನು ಹರಿಹರನಂತೆ ಗಣಿತದ ಲೆಕ್ಕಾಚಾರದಿಂದ ಅಳೆಯಲಾಗದು. ಅದು ಹರಿಹರ ವರ್ಣಿಸುವಂತೆ ಮೊದಲೇ ತೀರ್ಮಾನಿಸಿಕೊಂಡ ಪೂರ್ವನಿಶ್ಚಿತ ಯೋಚನೆಯಲ್ಲ (pre-determined or premeditated thought). ಅದೊಂದು ಅಕ್ಕನ ಹೃದಯದಲ್ಲಿ ಹಠಾತ್ ಉದ್ಭವಿಸಿದ ತೀವ್ರತರವಾದ ಭಾವನೆ (instant or spontaneous reaction). ಹೀಗೆ ಹೃದಯದಲ್ಲಿ ಸಹಜವಾಗಿ ಆವಿರ್ಭವಿಸುವ ಭಾವನಾತರಂಗಗಳು ಅಂಕಗಣಿತದ ಅಂಕೆಗೆ ಒಳಪಡುವುದಿಲ್ಲ. ಕ್ರಿಕೆಟ್ ಪಂದ್ಯದಲ್ಲಿ ವಿಕೆಟ್‌ಗಳ ಮಧ್ಯೆ ಓಡುವ ಆಟಗಾರರ ರನ್‌ಗಳಂತೆ ಸುಲಭವಾಗಿ ಲೆಕ್ಕಾಚಾರಕ್ಕೆ ಸಿಕ್ಕುವುದಿಲ್ಲ. ಇಷ್ಟೇ ರನ್‌ಗಳಿಗೆ ವಿಕೆಟ್ ಬೀಳುವುದೆಂದು ಊಹಿಸುವುದು ಎಷ್ಟು ಹಾಸ್ಯಾಸ್ಪದವೋ, ಹಾಗೆಯೇ ನಿರ್ದಿಷ್ಟವಾಗಿ ಮೂರು ತಪ್ಪುಗಳವರೆಗೆ ಕಾಯ್ದು ಬಿಟ್ಟುಹೋಗುವಳೆಂದು ಹರಿಹರ ಹೇಳುವುದೂ ಅಷ್ಟೇ ಹಾಸ್ಯಾಸ್ಪದವಾಗುತ್ತದೆ. ಹರಿಹರನ ಈ ಸಂಖ್ಯಾತಂತ್ರ ರಂಗ ಭೂಮಿಯ ಮೇಲೆ ಅಭಿನಯಿಸುವ ನಾಟಕಕ್ಕೆ ಸಾಂಕೇತಿಕವಾಗಿ ಸರಿಹೊಂದಬಹುದೇ ಹೊರತು ನಿಜ ಜೀವನದ ಅನುಭವದಲ್ಲಿ ಹಾಗೆ ಆಗಲು ಸಾಧ್ಯವಿಲ್ಲ. ಶಿಲ್ಪಿಯ ಕೈಯಿಂದ ಕಲ್ಲಿನ ಮೇಲೆ ಬೀಳುವ ಉಳಿಯ ಪೆಟ್ಟುಗಳು ಒಂದೇ ಎರಡೇ? ಅದು ಕಲ್ಲಿನ ಕಾಠಿಣ್ಯವನ್ನೂ ಶಿಲ್ಪಿಯ ಕಲಾ ನೈಪುಣ್ಯವನ್ನೂ ಅವಲಂಬಿಸಿದೆ. ಹಾಗೆಯೇ ಆಯಾಯ ವ್ಯಕ್ತಿಯ ಮನಸ್ಸಿನ ಮೇಲೆ ಬೀಳುವ ಜೀವನದ ಪೆಟ್ಟುಗಳ ಬಲ ಮತ್ತು ಅದನ್ನು ಸಹಿಸಿಕೊಳ್ಳಬಲ್ಲ ಮನಸ್ಸಿನ ಶಕ್ತಿ ಇವುಗಳನ್ನನುಸರಿಸಿ ಜೀವನದಲ್ಲಿ ಘಟನೆಗಳು ಸಂಭವಿಸುತ್ತವೆ. ಅಕ್ಕನ ಅಸಾಧಾರಣ ವ್ಯಕ್ತಿತ್ವವನ್ನು ಮಹಾಜ್ಞಾನಿ ಚನ್ನಬಸವಣ್ಣನು ತುಂಬಾ ಚೆನ್ನಾಗಿ ನಿರೂಪಿಸುತ್ತಾನೆ:

**ಅಜಕಲ್ಪಕೋಟಿ ವರುಷದವರೆಲ್ಲರೂ ಹಿರಿಯರೇ?**
**ಹುತ್ತೇರಿ ಬೆತ್ತ ಬೆಳೆದ ತಪಸ್ವಿಗಳೆಲ್ಲರೂ ಹಿರಿಯರೇ?**
**ನಡುಮುರಿದು, ಗುಡುಗೂರಿ, ತಲೆನಡುಗಿ**
**ನರೆ ತೆರೆ ಹೆಚ್ಚಿ ಮತಿಗೆಟ್ಟು**
**ಒಂದನಾಡ ಹೋಗಿ ಒಂಬತ್ತನಾಡುವ**
**ಅಜ್ಞಾನಿಗಳೆಲ್ಲರೂ ಹಿರಿಯರೇ?**
**ಅನುವನರಿದು, ಘನವ ಬೆರಸಿ,**
**ಹಿರಿದು ಕಿರಿದೆಂಬ ಭೇದವ ಮರೆದು**
**ಕೂಡಲ ಚನ್ನಸಂಗಯ್ಯನಲ್ಲಿ ಬೆರಸಿ ಬೇರಿಲ್ಲದಿಪ್ಪ ಹಿರಿಯತನ**
**ನಮ್ಮ ಮಹಾದೇವಿಯಕ್ಕಂಗಾಯ್ತು.**

'ಶರಣಸತಿ-ಲಿಂಗಪತಿ' ಭಾವವು ಬಾಲ್ಯದಲ್ಲಿ ಅಂಕುರಿಸಿ, ಯೌವನದಲ್ಲಿ ಪಲ್ಲವಿಸಿ, ಕೌಶಿಕನ ಕಠೋರ ವರ್ತನೆಯಿಂದ ಬಲಿತು ಬೆತ್ತಲೆಯಾದ ಅಕ್ಕ ಬಯಸಿದ್ದು ಸಾವಿಲ್ಲದ ಕೇಡಿಲ್ಲದ, ರೂಹಿಲ್ಲದ ಚೆಲುವ ಚನ್ನಮಲ್ಲಿಕಾರ್ಜುನನನ್ನು. ನಿರಾಕಾರನಾದ ಚನ್ನಮಲ್ಲಿಕಾರ್ಜುನನಿಗೆ ಯಾವ ಶರೀರವೂ ಇಲ್ಲ, ನಿಜ. ಆದರೆ ಅವನಲ್ಲಿ ಅಕ್ಕ ಕಂಡ ಚೆಲುವೆಂದರೆ ಸಾವಿಲ್ಲದ, ಕೇಡಿಲ್ಲದ ರೂಹಿಲ್ಲದ **ಅಲೌಕಿಕ** ಚೆಲುವು. ಒಡಲುಳ್ಳ ಅಕ್ಕ ಒಡಲಿಲ್ಲದ ಚೆನ್ನಮಲ್ಲಿಕಾರ್ಜುನನೊಂದಿಗೆ ಮಾಡಿದ ಅಲೌಕಿಕ ಸಂಸಾರ ಕೂಡಲಿಲ್ಲದ ಕೂಟ, ಅಗಲಲಿಲ್ಲದ ಅಪ್ಪುಗೆ. ಬೆಡಗು ಬಿನ್ನಾಣವಿಲ್ಲದ ನಿಬ್ಬೆರಗಿನ ನಿರ್ವಯಲು !

**ಲಿಂಗವೆನ್ನೆ ಲಿಂಗೈಕ್ಯವೆನ್ನೆ, ಸಂಗವೆನ್ನೆ ನಿಸ್ಸಂಗವೆನ್ನೆ**
**ಆಯಿತ್ತೆನ್ನೆ ಆಗದೆನ್ನೆ, ನಾನೆನ್ನೆ ನೀನೆನ್ನೆ**
**ಚೆನ್ನಮಲ್ಲಿಕಾರ್ಜುನ ಲಿಂಗದಲ್ಲಿ**
**ಘನಲಿಂಗೈಕ್ಯವಾದ ಬಳಿಕ ಏನೂ ಎನ್ನೆ!**

**6.10.2010**

**ಶ್ರೀ ತರಳಬಾಳು ಜಗದ್ಗುರು**
**ಡಾ|| ಶಿವಮೂರ್ತಿ ಶಿವಾಚಾರ್ಯ ಮಹಾಸ್ವಾಮಿಗಳವರು**
**ಸಿರಿಗೆರೆ**

❑